

# ಜೇ ಪ್ರಿಯೆ!

ಪ್ರಿಯಾಂಕಾ ಚೋಪ್ರಾಗೆ ಹೊಸ ಬಾಯ್‌ಫ್ರೆಂಡ್ ಸಿಕ್ಕಿದ್ದಾನೆ. ಹಾಗೆಂದು ಆಕೆ ಹೇಳಿಲ್ಲ. ಆದರೆ ಮಧ್ಯರಾತ್ರಿಯ ಬಳಿಕವೂ ಆಕೆ ಹುಡುಗನೊಬ್ಬನೊಂದಿಗೆ ರೆಸ್ಟೋರೆಂಟುಗಳಲ್ಲಿ ಕುಳಿತು ಗಪ್ಪಾ ಹೊಡೆಯುತ್ತಾಳೆಂದರೆ ಸಿನಿ ಪತ್ರಕರ್ತರಾದರೂ ಇನ್ನೇನೆಂದು ಬರೆಯಬೇಕು?

ಆತನ ಹೆಸರು ಜೇ ಸೀನ್. ಬ್ರಿಟಿಷ್‌ಗಾಯಕ. ಜತೆಗೆ ಕವಿತೆ ಬರೆಯುತ್ತಾನೆ, ಮ್ಯೂಸಿಕ್ ಆಲ್ಬಂಗಳ ನಿರ್ಮಾಪಕ. 'ನನ್ನದೂ ಒಂದು ಆಲ್ಬಂ ಹೊರಬರುತ್ತಿದೆ. ಅದಕ್ಕಾಗಿ ಜೇ ಸೀನ್ ಜತೆ ಚರ್ಚೆ ನಡೆದಿದೆ' ಎನ್ನುವುದು ಪ್ರಿಯಾಂಕಾ ಉತ್ತರ. ಅಂದ ಹಾಗೆ 2–3 ವರ್ಷಗಳ ಹಿಂದೆ ನ್ಯೂಯಾರ್ಕ್‌ನಲ್ಲಿ ಅಂಜಾನಾ ಅಂಜಾನಿ ಸಿನಿಮಾ ಶೂಟಿಂಗ್ ವೇಳೆ ಇವರ ಪರಿಚಯ ಆಯಿತಂತೆ. ಆ ಬಳಿಕ ಫೇಸ್ ಬುಕ್‌ನಲ್ಲಿ ನಂಟು ಬೆಳೆಯಿತಂತೆ. ಈಗ ಫೇಸ್ ಟು ಫೇಸ್!



# ಪಾಪ.. ಫ್ರೀಡಾ!

ಫ್ರೀಡಾ ಪಿಂಟೋ ಸದ್ಯಕ್ಕೆ ಫ್ರೀ ಇಲ್ಲ– ಕೈ ತುಂಬ ಚಿತ್ರಗಳಿವೆ. ಆದರೆ ಒಂದು ಚಿತ್ರವೂ ಬಾಕ್ಸಾಫೀಸ್‌ನಲ್ಲಿ ನಿಲ್ಲುತ್ತಿಲ್ಲ! ಹಾಲಿವುಡ್ ಸಮಾರಂಭಗಳಲ್ಲಿ ಹೊಸ ಗೌನ್ ಹಾಕಿ ಮಿಂಚೋದಾಗಲೀ, ಸೆಲೆಬ್ರಿಟಿ ಮ್ಯಾಗಸಿನ್‌ಗಳ ಮುಖಪುಟದಲ್ಲಿ ಮಿಂಚೋದಾಗಲೀ ಇನ್ನು ಎಷ್ಟು ದಿನ ನಡೆಯಲು ಸಾಧ್ಯ.. ಎನ್ನೋದೀಗ ಆಕೆಯ ಚಿಂತೆಯಂತೆ!

'ಸ್ಲಂಡಾಗ್ ಮಿಲಿಯನೇರ್' ಕಥೆ ಹಳೇದಾಯ್ತು. ಆ ಬಳಿಕ ಇನ್ನೂ ಎರಡು ಆಸ್ಕರ್ ಪ್ರಶಸ್ತಿಗಳು ಬಂದುಹೋದವು. ಫ್ರೀಡಾ ನಟಿಸಿದ ವೂಡಿ ಆಲನ್‌ನ 'ಯೂ ವಿಲ್ ಮೀಟ್ ಎ ಟಾಲ್ ಡಾರ್ಕ್ ಸ್ಟ್ರೇಂಜರ್' ಮತ್ತು ಜೂಲಿಯನ್ ಸ್ನೆಬರ್‌ನ 'ಮೈರಲ್' ಎರಡೂ ಚಿತ್ರಗಳು ತೋಪಾದವು. ಈಗ ಬಿಡುಗಡೆಯಾಗಿರುವ ರೂಪರ್ಟ್ ವಿಟ್‌ನ 'ರೈಸ್ ಆಫ್ ದಿ ಪ್ಲಾನೆಟ್..' ಕಲೆಕ್ಷನ್ ಚೆನ್ನಾಗಿದೆಯಾದರೂ ಅದರ ಕ್ರೆಡಿಟ್ ಚಿಂಪಾಂಜಿಗಳ ದಂಗೆಯ ತಂತ್ರಜ್ಞಾನಕ್ಕೆ ಹೋಗುತ್ತಿದೆಯಷ್ಟೇ ಹೊರತು ಫ್ರೀಡಾಳ ಅಭಿನಯಕ್ಕೆ ದಕ್ಕುತ್ತಿಲ್ಲ!

ತಾರ್ಸೆಮ್ ಸಿಂಗ್‌ರ 'ಇಮ್ಮೋರ್ಟಲ್' ಮೇಲೆ ಈಗ ಫ್ರೀಡಾ ತುಂಬ ಭರವಸೆಯಿಟ್ಟಿದ್ದಾಳೆ. ಜತೆಗೆ ಬ್ಲ್ಯಾಕ್ ಗೋಲ್ಡ್ ಕೂಡಾ ತೆರೆಗೆ ಸಿದ್ಧವಾಗುತ್ತಿದೆ. ಅವೆರಡೂ ಕೈಕಚ್ಚಿದರೆ ಫ್ರೀಡಾ ಮತ್ತೆ ಬಾಲಿವುಡ್‌ಗೆ ಮರಳಬೇಕೇನೋ!

# ಕತ್ರೀನಾ ಕಹಿ

ಸಲ್ಮಾನ್ ಖಾನ್ ತನ್ನ ಮಾಜಿ ಗರ್ಲ್‌ಫ್ರೆಂಡ್‌ಗಳ ಮೇಲೆ ಸೇಡು ತೀರಿಸುವ ಯಾವ ಅವಕಾಶವನ್ನೂ ಬಿಟ್ಟುಕೊಡುತ್ತಿಲ್ಲ! ಈ ಸಲ ಕತ್ರೀನಾ ಕೈಫ್ ಮೇಲೆ ಆತನ ಕೆಂಗಣ್ಣು ಬಿದ್ದಿದೆ. 'ಏಕ್ ಥಾ ಟೈಗರ್' ಎಂಬ ಹೊಸ ಚಿತ್ರದ ಪೋಸ್ಟರ್ ನೋಡಿದವರು ಇದನ್ನೇ ಮಾತನಾಡಿಕೊಳ್ಳುತ್ತಿದ್ದಾರೆ.

'ಏಕ್ ಥಾ ಟೈಗರ್'ನಲ್ಲಿ ಸಲ್ಲೂ ಮಿಯಾನಿಗೆ ಕತ್ರೀನಾ ನಾಯಕಿ. ಆದರೆ ಪೋಸ್ಟರ್‌ನಲ್ಲಿ ಸಲ್ಮಾನ್ ಚಿತ್ರ ಬಿಟ್ಟರೆ ಇನ್ನೊಬ್ಬರ ಮುಖವೇ ಇಲ್ಲ! ಪತ್ರಕರ್ತರು ಕತ್ರೀನಾಳಿಗೆ ಈ ಬಗ್ಗೆ ನೇರವಾಗಿ ಕೇಳಿದರಂತೆ. 'ಹೌದು, ಪೋಸ್ಟರ್ ನೋಡಿದೆ. ನನ್ನ ಚಿತ್ರ ಇಲ್ಲ. ತುಂಬ ಸುಂದರವಾಗಿದೆ' ಎಂದು ಕತ್ರೀನಾ ಮಾತಿನಲ್ಲಿ ಕಹಿ ತುಂಬಿಕೊಂಡೇ ಸಿಹಿ ನಗೆ ಬೀರಿದಳಂತೆ! ಪಾಪ, ಅದು ಬಿಟ್ಟು ಇನ್ನೇನು ಮಾಡಲಾದೀತು? ಟೈಗರ್ ಇರೋ ಕಾಡಿನಲ್ಲಿ ಇನ್ಯಾರೂ ಬದುಕುವಂತಿಲ್ಲ ಎನ್ನಬಹುದೆ?

■ ಬಿಂದು

